ಸ್ವತಂತ್ರ ಬಂದ ದಿನಾನೇ ನಾನು ಭೂಮಿ ಮೇಲೆ ಬಿದ್ದಿದ್ದು ಅಂತ ನಮ್ಮ ಬೂಬಮ್ಮಜ್ಜಿ ಹೇಳ್ತಿದ್ಲು. ನಮ್ಮ ಬೂಬಿ ಬಾಯಿಂದ ಯಾವೊತ್ತೂ ಅಪದ್ಧ ಬರ್ತಿರ್ಲಿಲ್ಲ...'' ಎಂದು ಹೆಮ್ಮೆಯಿಂದ ಹೇಳುತ್ತಿದ್ದ. ಮಹಮ್ಮದ್ ಬುಡೇನ್ ಎನ್ನುವುದನ್ನು ಮೊಟಕು ಮಾಡಿ ಮನೆಮಂದಿಯಲ್ಲದೆ ಊರವರು, ಪರ ಊರುಗಳವರು ಕೂಡ ಅವನನ್ನು 'ಬುಡೇನ್', 'ಬುಡೇನ್' ಎಂತಲೇ ಕರೆಯುತ್ತಿದ್ದರು. ದೊಡ್ಡವನಾದಂತೆ ಬುಡೇನ್ ಜೊತೆಗೆ ಸಾಬ್ ಸೇರಿಕೊಂಡು ಬುಡೇನ್ ಸಾಬಿ ಆಗಿಬಿಟ್ಟ.

ಬುಡೇನ್ ಸಾಬಿಯು ಅಕ್ಕಿರಾಂಪುರದ ಹೊಗೆಸೊಪ್ಪು, ಕಡ್ಡಿಪುಡಿ ವ್ಯಾಪಾರಿಯಾದ ಫಕೀರಪ್ಪ ಮತ್ತು ಫಾತಿಮಾ ಬೇಗಂ ದಂಪತಿಗೆ ಮದುವೆಯಾದ ಹತ್ತು ವರ್ಷಗಳಿಗೆ ಅದೂ ಹಿಂದೂಪುರದ ಹತ್ತಿರದ ಪೆನುಗೊಂಡದ ಬಾಬಯ್ಯನಿಗೆ ಹರಕೆ ಹೊತ್ತ ಮೇಲೆ ಹುಟ್ಟಿದ್ದು. ಹುಟ್ಟಿದ ಆರು ತಿಂಗಳಿಗೇ ದಂಪತಿ ಮಗುವಿನ ಸಮೇತ ಪೆನುಗೊಂಡಕ್ಕೆ ಹೋಗಿ ಒಂದು ಪಲ್ಲ ಬುರುಗನ್ನು, ಮೂರು ಕೇಜಿ ಬತ್ತಾಸನ್ನು ಬಾಬಯ್ಯನ ಮೇಲೆ ಸುರಿದು ಹರಕೆ ತೀರಿಸಿ ಬಂದಿದ್ದರು. ಫಕೀರಪ್ಪ ಹೊಗೆಸೊಪ್ಪು, ಕಡ್ಡಿ ಪುಡಿ ವ್ಯಾಪಾರಕ್ಕೆಂದು ಸಂತೆ, ಜಾತ್ರೆಗಳನ್ನು ತಿರುಗುತ್ತಿದ್ದನಲ್ಲದೆ ಮಧುಗಿರಿ, ಗೌರಿಬಿದನೂರು, ಹಿಂದೂಪುರಗಳಿಗೂ ಬಸ್ಸಿನಲ್ಲಿ ಹೋಗಿ ಒಂದೆರಡು ದಿನ ಮಾರಿಕೊಡು ಬರುತ್ತಿದ್ದ. ವಾರಕ್ಕೆರಡು ಸಾರಿಯಾದರೂ ಚಿಕನ್, ಮಟನ್ ತಂದು ತಾಯಿ ಬೂಬಿಜಾನ್‌ನಿಂದ ಘಮ್ಮೆನ್ನುವ ಬಿರಿಯಾನಿಯನ್ನು ಮಾಡಿಸಿಕೊಂಡು ಹೊಟ್ಟೆ ತುಂಬಾ ತಿನ್ನುತ್ತಿದ್ದನಲ್ಲದೆ ಮಗ ಬುಡೇನ್ ಸಾಬನಿಗೂ ಏಳು ತಿಂಗಳಿಂದಲೇ ಬಿರಿಯಾನಿ ತಿನ್ನಿಸಲು ಪ್ರಾರಂಭಿಸಿದ್ದ. ಫಕೀರಪ್ಪ ತುಂಬಾ ಧಾರಾಳಿ ಆಸಾಮಿ. ಕಡ್ಡಿ ಪುಡಿಯನ್ನು ಸೇರು, ಅಚ್ಚೇರು, ಪಾವು, ಅರೆಪಾವು, ಚಟಾಕುಗಳಲ್ಲಿ ಅದುಮಿ ಅದುಮಿ ತುಂಬಿ ಅಳೆದು ಕೊಡುತ್ತಿದ್ದುದಲ್ಲದೆ ಮೇಲೆ ಕೊಸರು ಕೂಡ ಹಾಕುತ್ತಿದ್ದ. ಹಾಗೆಯೇ ಗಂಡಸರಿಗೂ ಹೊಗೆಸೊಪ್ಪಿನ ಎಸಳುಗಳನ್ನು ಧಾರಾಳವಾಗಿ ಕೊಡುತ್ತಿದ್ದ. ಅದೂ ಅಲ್ಲದೆ ಯಾರಾದರೂ ದುಡ್ಡಿಲ್ಲದೆ ಪರದಾಡುತ್ತಿರುವುದು ಕಂಡುಬಂದರೆ ''ಅರೆ, ಯಾಸಟ್ಗೆ ಮುಂದಿನ ಸಾರಿ ಬಂದಾಗ ಕೊಡೀವ್ರಂತೆ ತಗಳ್ರಿ, ನೀವೇನು ಊರು ಬಿಟ್ಟು ಓಡೋಗ್ತೀರೋ ಇಲ್ಲ ನಾನೇನು ಇವೊತ್ಗೆ ಯಾಪಾರ ನಿಲ್ಲಿಸ್ತೀನೋ...'' ಎಂದು ಕಡ್ಡಿಪುಡಿ, ಹೊಗೆಸೊಪ್ಪನ್ನು ಅಳೆದು ಸೆರಗು, ಟವಲ್ಲುಗಳಿಗೆ ಹಾಕಿ ಹೋಗುತ್ತಿದ್ದ. ಹಾಗಾಗಿ ಅನೇಕ ಹಳ್ಳಿಗಳ ಗಂಡಸರು, ಹೆಂಗಸರು ಹೊಗೆಸೊಪ್ಪು, ಕಡ್ಡಿಪುಡಿ ಖರೀದಿಸಲು ಸಂತೆಗಳಿಗೂ ಹೋಗದೆ ಫಕೀರಪ್ಪನಿಗೇ ಕಾಯುತ್ತಿದ್ದರು. ಫಕೀರಪ್ಪ ಕಷ್ಟದಲ್ಲಿರೋರಿಗೆ ಫಕ್ಕನೆ ನೆರವಾಗುತ್ತಿದ್ದ. ಫಕೀರಪ್ಪನ ದೊಡ್ಡ ಸೌಭಾಗ್ಯ ತಾಯಿ ಬೂಬಿಜಾನೇ ಆಗಿದ್ದಳು. ಐವತ್ತೈದು ವರ್ಷಗಳಾಗಿದ್ದರೂ ಬೂಬಿಜಾನ್ ಗಟ್ಟಿಮುಟ್ಟಾಗಿದ್ದು ಮನೆ ಕೆಲಸಗಳನ್ನೆಲ್ಲ ತಾನೇ ಮಾಡುತ್ತಾ ಸೊಸೆಯನ್ನು ಸುಖವಾಗಿಟ್ಟಿದ್ದಳು.

ತಾಯಿ ಬೂಬಿಜಾನ್ ಮನೆಯಲ್ಲಿ ಇದ್ದುದ್ದರಿಂದ ಫಕೀರಪ್ಪನಿಗೆ ವ್ಯಾಪಾರ ನಿಮಿತ್ತ ಬೇರೆ ಊರುಗಳಿಗೆ ಹೋದರೂ ಮನೆಯ ಕಡೆ ಚಿಂತೆ ಇರಲಿಲ್ಲ. ಮಗ ಬುಡೇನ್ ಹುಟ್ಟಿದ ಮೇಲಂತೂ ಮನೆಯಲ್ಲಿ ಇನ್ನಷ್ಟು ಸಂತೋಷ ಮನೆ ಮಾಡಿತ್ತು. ಬೂಬಮ್ಮ ''ಲೇ ಅಪ್ಪಯ್ಯ ಫಕೀರ, ಯೀಟೊಂದು ಯಾಪಾರ ಮಾಡ್ತೀಯ, ಒಂದೀಸು ಕಾಸ್ನೂ ಕೂಡಿಟ್ಟಿಲ್ವಲ್ಲೋ. ಯಾಸಟ್ಗೆ ಇನ್ಮೇಕಾದ್ರೂ ವಸೊಸಿ ಕೂಡಿಡೋಕೆ ನೋಡು. ಬುಡೇನ್ ಅಪ್ಪಯ್ಯನ್ನ ಚಂದಾಗಿ ಓದಿಸಿದ್ರೆ ದಫೇದಾರ್ ಗಿಫೇದಾರ್ ಆದಾನು. ಕೊರಟಗೆರೆ ಆ ದಫೇದಾರ್ ಕಾಸಿಂ ಸಾಬೀನ ನೋಡು, ಏನ್ ದೌಲತ್ತಾಗಿ ಬಾಳ್ತಾ ಅವ್ನೆ...'' ಎಂದು ಉಪದೇಶ ಮಾಡುತ್ತಿದ್ದಳು. ತಾಯಿ ಮಾತಿಗೆ ಫಕೀರಪ್ಪನು ''ಹಂಗೆ ಆಗ್ಲೇಳಮ್ಮ, ಅವ್ನು ಓದಿದ್ರೆ ನಾ ಬೇಡ ಅಂತೀನ. ಆ ಅಲ್ಲಾ ಗೀಚ್ದ್ ಹಣೇಬರಾನ ಯಾರ್ ತಿದ್ದೋಕಾಗ್ತದೆ. ಯಾರಿಗೂ ನೋವ್ ಕೊಡ್ದೆ ಬದುಕಿದ್ರಾಯ್ತು. ದಫೇದಾರ್ ಕಾಸೀಂಸಾಬಿ ಕಥೆ ಗೊತ್ತೇನು ನಿಂಗೆ. ತುಮಕೂರಿನಾಗೊಬ್ಳನ್ನ, ಶಿರಾದಾಗೊಬ್ಳನ್ನ ಇಟ್ಕಂಡವ್ನಂತೆ. ಒಂದೊದಪ ಟೇಸನ್ನಾಕೆ